ಮಾಡಿದ ಖರ್ಚು ಅಲ್ಲಿಗಲ್ಲಿಗೆ... ಅಂದರು ಕೆಲವರು ಆಕಳಿಸುತ್ತಾ. ಏಳೆಂಟು ದಿನ ಅಲೆದಾಡಿದವರಿಗೆ ಗಾಣ, ಸಲಕರಣೆಗಳು ಸಿಗಲಿಲ್ಲ. ಸಿಗದಿರಲಿ ಅಂತ ಮನಸಲ್ಲೆ ಹಾರೈಸಿದ ಗೌರಕ್ಕ 'ಚಂದ್ರಶೇಖರ ಫೋನು ಮಾಡಿದ್ದ. ಅಪ್ಪಯ್ಯ ಸುಮ್ನೆ ಮೈ ನುಗ್ಗು ಮಾಡಿಕೊಳ್ತಾನೆ ಅಂತ ಬೇಜಾರು ಮಾಡಿಕೊಂಡ' ಅಂದಳು ರಾತ್ರಿ ಊಟ ಬಡಿಸುವಾಗ. 'ಹೌದೌದು, ಬೇಜಾರು ಮಾಡಕೊಳದೆ ಏನು ಮಾಡತಾನೆ? ನೀನೇನೋ ವರದಿ ಮಾಡಿರ್ತೀಯ, ಅದಕ್ಕೊಂದು ಉತ್ತರ ಕೊಟ್ಟಿರ್ತಾನೆ. ಈ ಕಡೆ ಮುಖಹಾಕಿ ಐದು ವರ್ಷವಾಯ್ತು, ಅದು ನೆನಪಿದ್ಯಂತ ಅವನಿಗೆ...' ಅಂತ ದನಿ ಏರಿಸಹೋಗಿ ಸಾರು ತೆರವು ಸಿಕ್ಕಿ ಕೆಮ್ಮತೊಡಗಿದರು. ಗಂಡುಮಕ್ಕಳಷ್ಟೇ ಅಲ್ಲ, ಮಗಳೂ ಓದುವುದರಲ್ಲಿ ಚುರುಕು. ಐದೆಕರೆ ಅಡಕೆತೋಟ. ನೀರಿನ ಹರಿವು, ಸುತ್ತಲ ಬೆಟ್ಟ ಸೊಂಪಾಗಿತ್ತು. ವರಮಾನಕ್ಕೆ ಕೊರತೆಯಿರಲಿಲ್ಲ.

ಚೆನ್ನಾಗಿ ಓದುತ್ತಿದ್ದ ಮಕ್ಕಳಿಗೆ ಹೃದಯ ತೆರೆದು ಪ್ರೋತ್ಸಾಹ ನೀಡಿದರು. ಚಂದ್ರಶೇಖರ ಎಂಜನಿಯರಾಗಿ ಅಮೆರಿಕಕ್ಕೆ ಹೊರಟಾಗ ಅಷ್ಟು ಗೊತ್ತಾಗಲಿಲ್ಲ. ಎರಡು ವರ್ಷಕ್ಕೆ ಪದ್ಮನಾಭನೂ ಅಮೆರಿಕಕ್ಕೆ ಹೊರಟು ನಿಂತ. '...ನಿಂಗೆ ಇಲ್ಲೇ ಎಲ್ಲಾದರೂ ಸಿಗೋದಿಲ್ಲೇನೋ?' ಅನ್ನೋ ಪ್ರಶ್ನೆಯಲ್ಲಿ ಎಲ್ಲರೂ ದೂರ ಹೋದರೆ ಹೇಗೆ ಅನ್ನುವ ಬೇಡಿಕೆಯಿತ್ತು. 'ಪ್ರತಿಷ್ಠಿತ ಕಂಪೆನಿ ಅಪ್ಪಯ್ಯ, ಎಲ್ರಿಗೂ ಸಿಗೋದಲ್ಲ. ಎರಡು ವರ್ಷ ಇದ್ದು ನೋಡತೇನೆ, ಆಗದ?' ಹೊಂಗನಸನ್ನು ಚಪ್ಪರಿಸುತ್ತಿದ್ದವನನ್ನು ತಡೆದು ಪಕ್ಷಪಾತ ಮಾಡೋದು ಹೇಗೆ? ಪ್ರತಿಮಾಳೂ ಎಂಜಿನಿಯರೇ. ಇಲ್ಲಿರುವ ವರನಿಗೇ ಮದುವೆಮಾಡಿ ಕೊಟ್ಟದ್ದಾಗಿತ್ತು; ಅವಳದೇನು ತಪ್ಪಿಲ್ಲ. ಅಳಿಯ ಕೆನಡಾದಲ್ಲಿ ದೊಡ್ಡ ಕೆಲಸ ಸಿಕ್ಕಿ ಹೊರಟು ನಿಂತಾಗ ತಡೆಯಲು ತಾನ್ಯಾರು? ಮಗಳೂ ಹಿಂಬಾಲಿಸಿ ಮೂರು ವರ್ಷವಾಯಿತು. ಗಂಡು ಮಕ್ಕಳಿಗೆ ಮದುವೆಯಾಗಿ ಮೊಮ್ಮಗನಿಗೇ ಈಗ ನಾಲ್ಕುವರ್ಷ. ಬಂದದ್ದು ಮೂರುಸಲ. ಮೊಮ್ಮಗನನ್ನು ಕಂಡದ್ದು ಒಂದೇಸಲ. ಕಂಪ್ಯೂಟರಲ್ಲಿ ಮೊಮ್ಮಕ್ಕಳ ಆಟಪಾಟ ಆನಂದಿಸುವುದಾಗಲಿ ಎತ್ತಿ ಮುದ್ದಾಡುವುದಾಗಲಿ ಸಾಧ್ಯವ? ಇಲ್ಲಿಯ ಮಕ್ಕಳಂತೆ ಅಲ್ಲಿಯವನ್ನು ಮುದ್ದಾಡುವುದೂ ಸಾಧ್ಯವಿಲ್ಲ, ಅದ್ಯಾವ ರೀತಿನೀತಿಯೋ. ಬೇಸರ ತೋಡಿಕೊಂಡು ವರಾತ ಹಚ್ಚಿದರೆ ನಮಗೇ ಅಲ್ಲಿ ಬಂದು ಎರಡು ತಿಂಗಳಿದ್ದು ಹೋಗಿ, ಖರ್ಚು ತಾವು ಭರಿಸುತ್ತೇವೆ ಅಂತಾರೆ. ಬೈರಾಗಿಗಳಂತೆ ಹಾಗೆ ಎದ್ದು ಹೊರಟುಬಿಡಲು ಸಾಧ್ಯವ? ಈ ತೋಟ, ಮನೆ, ದನ ಎಲ್ಲ ಇಲ್ಲಿ ನೋಡಿಕೊಳ್ಳೋರು ಯಾರು? ಧೈರ್ಯ ಬರುವುದಿಲ್ಲ. ಇವಳ ಹತ್ತಿರ ನೀನು ಹೋಗಿದ್ದು ಬಾ ಅಂದರೆ ಇವಳು ಮತ್ತೂ ಬಲ, ನಿರ್ಧಾರ ಮಾಡಲಾಗದೆ ಒದ್ದಾಡುತ್ತಾಳೆ. ಇದನ್ನೆಲ್ಲ ಹೇಳಿದರೆ ಯಾಕೆ ಮೈಕೈ ನೋವು, ಆಸ್ತಿಯನ್ನ ಮಾರಿ ಶಹರದಲ್ಲಿ ಒಂದು ಒಳ್ಳೆ ಫ್ಲಾಟು ತೊಗೊಂಬಿಡಿ,

**ನಾಲ್ಕು ದಿನ ಹಗಲಿರುಳು ತಪಸ್ಸಿಗೆ ಕುಳಿತಂತೆ ಸ್ಥಾಪಿತನಾದ ಮುತ್ತಾಚಾರಿ ಕೈಯಲ್ಲಿ ಮೂರು ಕಣೆಗಳು ಜನ್ಮತಾಳಿದ್ದವು. ಮುದ್ದಳ್ಳಿ ಕಮ್ಮಾರನಲ್ಲಿ ಹೋಗಿ ಅವನೇ ಹಾಕಿಟ್ಟುಕೊಂಡ ವಿನ್ಯಾಸ, ಅಳತೆಯಲ್ಲಿ ಕಬ್ಬಿಣದ ಪಟ್ಟಿಗಳು ಅವಕ್ಕೆ ರಂಧ್ರಗಳನ್ನು ಮಾಡಿಸಿಕೊಂಡು ತಂದ.**